# ‘ನಿಧಾನ ಧ್ಯಾನ’ದ ಸಮರ್ಥ್

**ಈ ಬಾರಿಯ ರಣಜಿ ಕ್ರಿಕೆಟ್‌ನಲ್ಲಿ ಕರ್ನಾಟಕದ ಪರವಾಗಿ ಮೊದಲ ಶತಕ ದಾಖಲಿಸಿದ್ದು ಆರ್. ಸಮರ್ಥ್. ಸಂಯಮದಲ್ಲಿ ಅದ್ದಿ ತೆಗೆದಂತೆ ಆಡುವ ಅವರು ಬಾಲ್ಯದಿಂದಲೂ ದೀರ್ಘಾವಧಿ ಕ್ರಿಕೆಟ್ಟನ್ನೇ ಮೆಚ್ಚುತ್ತಾ ಬೆಳೆದಿದ್ದಾರೆ.**

■ **ವಿಶಾಖ ಎನ್.**

ಚಿತ್ರ: ಎಸ್.ಕೆ. ದಿನೇಶ್

‘ನಾನು ಹೀಗೆಯೇ ಆಡುವುದು. ತಣ್ಣಗೆ. ತಲೆತಗ್ಗಿಸಿ. ಪಿಚ್‌ನ ಕಣಕಣದ ಮರ್ಮವನ್ನೂ ಅರಿತುಕೊಂಡು ದೀರ್ಘಕಾಲ ನಿಂತು ಆಡುವ ಸುಖ ನನಗೆ ಬದುಕಿನಲ್ಲಿ ಸಾಕಷ್ಟು ಕೊಟ್ಟಿದೆ’ – ರವಿಕುಮಾರ್ ಸಮರ್ಥ್ ಶಿವಮೊಗ್ಗದ ನವುಲೆಯ ಕೆಎಸ್‌ಸಿಎ ಕ್ರೀಡಾಂಗಣದ ಕಾರಿಡಾರಿನಲ್ಲಿ ಹೀಗೆ ಹೇಳುತ್ತಲೇ ಸಾರ್ಥಕ ನಗುವೊಂದನ್ನು ತುಳುಕಿಸಿದರು.

ಈ ಸಲದ ರಣಜಿ ಕ್ರಿಕೆಟ್ ಋತುವಿನಲ್ಲಿ ಕರ್ನಾಟಕದ ಪರವಾಗಿ ಮೊದಲ ಶತಕ ದಾಖಲಿಸಿದ ಶ್ರೇಯಸ್ಸು ಮೈಸೂರು ಮೂಲದ ಈ ಹುಡುಗನದ್ದು.

ಮಧ್ಯಪ್ರದೇಶದ ವಿರುದ್ಧದ ರಣಜಿ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಸಮರ್ಥ್ ಭರ್ತಿ ಏಳು ಗಂಟೆ ಎಂಟು ನಿಮಿಷ ಮೈದಾನದಲ್ಲಿ ಇದ್ದರು; ಅದೂ ಬ್ಯಾಟಿಂಗ್ ಮಾಡುತ್ತಾ. ಆರಂಭಿಕ ಆಟಗಾರನಿಗೆ ಸುದೀರ್ಘಾವಧಿ ಕ್ರಿಕೆಟ್‌ನಲ್ಲಿ ಇರಲೇಬೇಕಾದ ಸಂಯಮದಲ್ಲಿ ಅವರು ತಮ್ಮನ್ನು ತಾವು ಅದ್ದಿ ತೆಗೆದುಕೊಂಡಂತೆ ಇದ್ದಾರೆ.

‘ಮೊದಲ ದಿನದಾಟದ ಮೊದಲೆರಡು ಗಂಟೆ ಪಿಚ್‌ನಲ್ಲಿ ಮಧ್ಯಮದ ವೇಗದ ಬೌಲರ್‌ಗಳಿಗೆ ಸ್ವಿಂಗ್ ಸಿಗುತ್ತಿತ್ತು. ಚೆಂಡು ಸಾಕಷ್ಟು ಎತ್ತರಕ್ಕೆ ಪುಟಿಯುತ್ತಿತ್ತು. ಹೀಗಾಗಿ ಪ್ರತಿ ಎಸೆತವನ್ನು ಅಂದಾಜು ಮಾಡುತ್ತಾ, ಅದು ಸಾಗುವ ದಿಕ್ಕನ್ನು ಗಮನಿಸುವುದು ಮುಖ್ಯ’ ಎಂಬ ಅವರ ಮಾತು ಕೇಳಿದರೆ ರಾಹುಲ್ ದ್ರಾವಿಡ್ ನೆನಪಾಗುತ್ತಾರೆ. ಆದರೆ, ಅವರು ಆರಾಧಿಸುತ್ತಾ ಬೆಳೆದದ್ದು ಸಚಿನ್ ತೆಂಡೂಲ್ಕರ್ ಅವರನ್ನು.

ಬರೀ ಏಳು ಬೌಂಡರಿ ಹೊಡೆದು, 302 ಎಸೆತಗಳನ್ನು ಎದುರಿಸಿ ಕೇವಲ 108 ರನ್ ಗಳಿಸುವುದು ದ್ರಾವಿಡ್ ಜಾಯಮಾನದ ಆಟವೇ ಹೌದು. ಆದರೆ, ಕ್ರಿಕೆಟ್ ಧ್ಯಾನದ ವಿಷಯದಲ್ಲಿ ಸಮರ್ಥ್‌ಗೆ ತೆಂಡೂಲ್ಕರ್ ಆಪ್ಯಾಯಮಾನ.

ಇದು ಈಗೀಗ ಅಳವಡಿಸಿಕೊಂಡ ಶೈಲಿ ಅಲ್ಲ. ಶಾಲಾ ಕ್ರಿಕೆಟ್‌ನಿಂದಲೂ ಇದೇ ಜಾಯಮಾನವನ್ನು ಅವರು ತಮ್ಮದಾಗಿಸಿಕೊಂಡದ್ದು. ಬೆಂಗಳೂರಿನ ಬಿಷಪ್ ಕಾಟನ್ ಬಾಲಕರ ಶಾಲೆಯಲ್ಲಿ ಕಲಿತ ಈ ಬ್ಯಾಂಕ್ ನೌಕರನ ಮಗ ಎಸ್‌ಬಿಎಂ ಜೈನ್ ಕಾಲೇಜಿನಲ್ಲಿ ಬಿ.ಕಾಂ ಓದುವ ಹೊತ್ತಿಗೆ ಕ್ರಿಕೆಟ್‌ನಲ್ಲಿ ಛಾಪು ಮೂಡಿಸಿ ಆಗಿತ್ತು. ‘ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಕ್ರಿಕೆಟ್’ನಲ್ಲಿ ಮೂಲಪಾಠಗಳನ್ನು ಕಲಿತುಕೊಂಡ ಸಮರ್ಥ್, 14 ವರ್ಷ, 16 ವರ್ಷದೊಳಗಿನವರ ಶಾಲಾ ಕ್ರಿಕೆಟ್ ತಂಡದ ನಾಯಕರೂ ಆಗಿದ್ದವರು. ಬ್ಯಾಟಿಂಗ್, ಬೌಲಿಂಗ್ ಎರಡರಲ್ಲೂ ಆರಂಭಿಕ ಆಟಗಾರ ಇವರೇ ಎನ್ನುವುದು ಅಚ್ಚರಿಯಾದರೂ ನಿಜ. ಆಫ್‌ಬ್ರೇಕ್ ಬೌಲಿಂಗ್ ಮಾಡುತ್ತಿದ್ದ ಈ ಹುಡುಗ ಆಮೇಲಾಮೇಲೆ ಬ್ಯಾಟ್ಸ್‌ಮನ್ ಸ್ಪೆಷಲಿಸ್ಟ್ ಆಗಿ ಬದಲಾದರು.

ಕೆಎಸ್‌ಸಿಎ ವಿಭಾಗ ಮಟ್ಟದ ಲೀಗ್‌ಗಳಲ್ಲೂ ತಮ್ಮ ಸಾಮರ್ಥ್ಯ ತೋರಿದರು. 2011ರಲ್ಲಿ ಆ ಪಂದ್ಯಗಳಲ್ಲಿ 1,200 ರನ್ ಸೇರಿಸಿದ್ದು ವಿಶೇಷ. 19 ವರ್ಷದೊಳಗಿನವರ ರಾಷ್ಟ್ರಮಟ್ಟದ ಟೂರ್ನಿಗಳಲ್ಲಿ ಅದು ದೊಡ್ಡ ಮೊತ್ತವೇ ಹೌದು. ಆದರೆ, ಆಗ ಅವರು ಕರ್ನಾಟಕ ರಣಜಿ ಕ್ರಿಕೆಟ್ ತಂಡಕ್ಕೆ ಅಯ್ಕೆ ಆಗಲಿಲ್ಲ. 2013ರ ಡಿಸೆಂಬರ್‌ನಲ್ಲಿ ಆ ಅವಕಾಶ ಸಿಕ್ಕಿದ್ದು. ಮುಂಬೈ ವಿರುದ್ಧ ಮೊದಲ ಪಂದ್ಯ ಆಡುವ ಅವಕಾಶ ಲಭಿಸಿತು. ಮೊದಲ ಇನಿಂಗ್ಸ್‌ನಲ್ಲಿ ಕೆ.ಎಲ್. ರಾಹುಲ್ ಜೊತೆಗೆ ಬ್ಯಾಟಿಂಗ್ ಜೋಡಿಯಾಗಿ ಕಣಕ್ಕಿಳಿದ ಸಮರ್ಥ್ ಗಳಿಸಿದ್ದು ಬರೀ 18. ಎರಡನೇ ಇನಿಂಗ್ಸ್‌ನಲ್ಲಿ 75 ರನ್‌ಗಳನ್ನು ಕಲೆಹಾಕಿದರು. ಆಗ ಯಾವ ಗತಿಯಲ್ಲಿ ಇನಿಂಗ್ಸ್ ಕಟ್ಟಬೇಕು ಎನ್ನುವ ಕುರಿತು ಸಮರ್ಥ್ ಕೊಂಚ ಗೊಂದಲಕ್ಕೆ ಈಡಾಗಿದ್ದು ನಿಜ. ಆ ಪಂದ್ಯದ ಎರಡನೇ ಇನಿಂಗ್ಸ್‌ನಲ್ಲಿ ಅವರು ಹತ್ತು ಬೌಂಡರಿಗಳನ್ನು ಹೊಡೆದದ್ದೇ ಇದಕ್ಕೆ ಸಾಕ್ಷಿ.

2013ರಲ್ಲಿ ಸಫಿ ದರಾಷಾ ಟ್ರೋಫಿ ಕ್ರಿಕೆಟ್‌ನಲ್ಲಿ ಕೆಎಸ್‌ಸಿಎ ಪ್ರೆಸಿಡೆಂಟ್ಸ್ ಇಲೆವೆನ್ ಪರವಾಗಿ ಆಡಿದ ಎಂಟು ಇನಿಂಗ್ಸ್‌ಗಳಲ್ಲಿ ಆರು ಶತಕಗಳು ಸಮರ್ಥ್ ಬ್ಯಾಟ್‌ನಿಂದ ಹೊಮ್ಮಿದ್ದವು.

ಇದುವರೆಗೆ 62 ಪ್ರಥಮ ದರ್ಜೆ ಕ್ರಿಕೆಟ್ ಪಂದ್ಯಗಳ 107 ಇನಿಂಗ್ಸ್‌ಗಳಲ್ಲಿ ಸಮರ್ಥ್ ಆಡಿದ್ದಾರೆ. 39.09ರ ಸರಾಸರಿಯಲ್ಲಿ 3909 ರನ್‌ಗಳನ್ನು ಕಲೆಹಾಕಿದ್ದಾರೆ. 50 ಅರ್ಧಶತಕಗಳು ಹಾಗೂ 9 ಶತಕಗಳು ಇದರಲ್ಲಿ ಸೇರಿವೆ.

ಒಂದು ವೇಳೆ ಟೆಸ್ಟ್ ಕ್ರಿಕೆಟ್‌ಗೆಂದೇ ದೇಸಿ ಪ್ರತಿಭೆಗಳನ್ನು ಆಯ್ಕೆ ಮಾಡಿದರೆ, ಅದರಲ್ಲಿ ಈ ಹುಡುಗನ ಹೆಸರು ನಿಸ್ಸಂಶಯವಾಗಿ ಇರುತ್ತದೆ. ಇಷ್ಟಕ್ಕೂ ಅವರನ್ನು ಈಗ ಹುಡುಗ ಎಂದು ಕರೆದರೆ ಕೆನ್ನೆ ತುಸು ಕೋಪದಿಂದ ಕೆಂಪಗಾಗಬಹುದು. ಯಾಕೆಂದರೆ, ಅವರಿಗೆ ಈ ವರ್ಷ ಜನವರಿಗೆ 27 ತುಂಬಿದೆ. ■



ಮಧ್ಯಪ್ರದೇಶ ವಿರುದ್ಧದ ರಣಜಿ ಪಂದ್ಯದಲ್ಲಿ ಶತಕವೀರ ಸಮರ್ಥ್.
ಚಿತ್ರ: ಎಸ್.ಕೆ. ದಿನೇಶ್